**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 54/2022**

**ಸಾಕ್ಷಿಗೆ ದಿನಾಂಕ 18.2.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಇಮ್ರಾನ್ ಖಾನ್ | ಪಿ.ಡಬ್ಲ್ಯೂ-3 |
| ತಂದೆಯ/ಗಂಡನ ಹೆಸರು | : | ಲೇಟ್ ಬಾಬು | ಸಿ.ಡಬ್ಲ್ಯೂ-7 |
| ವಯಸ್ಸು | : | 38 | |
| ಉದ್ಯೋಗ | : | ವ್ಯಾಪಾರ | |
| ವಾಸಸ್ಥಳ | : | ಸರಗೂರು | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಈಗ ನೋಡುತ್ತಿರುವ ನಿಪಿ5 ರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಈಗ ಸುಮಾರು 2 ವರ್ಷದ ಹಿಂದೆ ಹೆಚ್.ಡಿ.ಕೋಟೆ ಪೋಲಿಸರು ಅಪಘಾತದ ವಿಚಾರವಾಗಿ ಹ್ಯಾಂಡಪೋಸ್ಟನಲ್ಲಿ ಮೈಸೂರು-ಮಾನಂದವಾಡಿ ರಸ್ತೆಯಲ್ಲಿರುವ ಪೆಟ್ರೋಲ್ ಬಂಕ್ ಹತ್ತಿರ ಸ್ಥಳ ತನಿಖೆಗೆ ಬಂದಿದ್ದು ಪೋಲಿಸರು ಸ್ಥಳವನ್ನು ಪರಿಶೀಲಿಸಿ ಸಂಜೆ 4 ಗಂಟೆ ಸಮಯದಲ್ಲಿ ನಿಪಿ5 ರಂತೆ ಪಂಚನಾಮೆಯನ್ನು ಮಾಡಿ ಸದರಿ ಸ್ಥಳದಲ್ಲಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ನಿಪಿ5 ದಾಖಲೆಗೆ ನನ್ನ ಜೊತೆ ಚಾಸ6 ರವರು ಸಹ ಸಹಿ ಮಾಡಿರುತ್ತಾರೆ. ಅಲ್ಲದೇ ಸದರಿ ಸ್ಥಳದಲ್ಲಿ ನಿಪಿ6 ರಂತೆ ನಕಾಶೆಯನ್ನು ತಯಾರಿಸಿರುತ್ತಾರೆ. ನಿಪಿ6 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ6 ಬಿ ಎಂದು ಗುರುತಿಸಲಾಯಿತು. ಮಹಜರಿನ ಸಮಯದಲ್ಲಿ ಪೋಲಿಸರು ನಿಪಿ7 ರಂತೆ ಭಾವಚಿತ್ರವನ್ನು ತೆಗೆದಿರುತ್ತಾರೆ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಎಸ್.ಕೆ.ಎಸ್ ವಕೀಲರಿಂದಃ**

ನನಗೆ ನಿಪಿ5 ರಲ್ಲಿ ಬರೆದಿರುವ ವಿಚಾರ ಗೊತ್ತಿರುವುದಿಲ್ಲ. ನಿಪಿ5 ನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಮಹಜರು ಮಾಡಿದ ಸಮಯದಲ್ಲಿ ಯಾರೆಲ್ಲ ಹಾಜರಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಪೋಲಿಸರು ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ ಎಂದರೆ ಸರಿ. ಮಹಜರು ಮಾಡಿದ್ದಾರೆ ಎಂದು ಹೇಳುವ ಸಮಯದಲ್ಲಿ ಪೋಲಿಸರು

ನನಗೆ ನೋಟಿಸನ್ನು ನೀಡಿರುವುದಿಲ್ಲ. ನನ್ನ ಸಮಕ್ಷಮ ಪೋಲಿಸರು ಯಾವುದೇ ಮಹಜರನ್ನು ಮಾಡಿರುವುದಿಲ್ಲ, ನಿಪಿ5 ಕ್ಕೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ